[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 533/2024**

**..................................................Vs...................................**

ಸಾಕ್ಷಿದಾರನ ಹೆಸರು ಃ ಟಿ ಡಿ ನಾಗರಾಜ್ ಪಿ.ಡಬ್ಲ್ಯೂಃ 9

ತಂದೆಯ ಹೆಸರುಃ ಟಿ ಸಿ ಧರ್ಮಪ್ಪ ಸಿ.ಡಬ್ಲ್ಯೂಃ 24

ಪ್ರಾಯ ಃ 46 ವರ್ಷ

ಉದ್ಯೋಗ ಃ ಪೊಲೀಸ್ ನೀರಿಕ್ಷಕ ಕಂಕನಾಡಿ ಪೊಲೀಸ್ ಠಾಣೆ

ವಾಸ ಃ ಮಂಗಳೂರು

ದಿಃ 21.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ದಿಃ12.12.2022 ರಿಂದ 14.02.2024 ರವರಿಗೆ ಕಾರ್ಕಳ ವೃತ ನೀರಿಕ್ಷಕರಾಗಿ ಕಾರ್ಕಳ ವೃತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 26.01.2024 ರಂದು ಚಾಸಾ-17 ರವರಿಂದ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಪ್ರಕರಣದಲ್ಲಿ ಮೃತಪಟ್ಟ ಮರಿಯ ಪೆರ್ನಾಂಡಿಸ್ ರವರ ಮಹಜರು ಕ್ರಮವನ್ನು ನಡೆಸಿ ಮರಣೋತ್ತರ ಶವಪರೀಕ್ಷೆಯಾದ ಬಳಿಕ ವಾರಸುದಾರರಿಗೆ ಮೃತದೇಹವನ್ನು ಬಿಟ್ಟುಕೊಡುವಂತೆ ಚಾಸಾ-23 ರವರಿಗೆ ಸೂಚಿಸಿ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಬೆಳಿಗ್ಗೆ 9.30 ಗಂಟೆಗೆ ಅಪಘಾತ ಸ್ಥಳವಾದ ಕಾರ್ಕಳ ಪಡುಬಿದ್ರೆ ರಸ್ತೆಯ ನಂದಳಿಕೆ ಗ್ರಾಮದ ಮಾವಿನಕಟ್ಟೆ ಬಳಿ ಭೇಟಿ ನೀಡಿ ಅಪಘಾತ ಸ್ಥಳವನ್ನು ಚಾಸಾ-2 ರವರು ತೋರಿಸಿಕೊಟ್ಟಂತೆ ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 9.30 ರಿಂದ 10.30 ರವರೆಗೆ ಮಹಜರು ತಯಾರಿಸಿ ಆ ಸಮಯ ಅಪಘಾತಕ್ಕೊಳಪಟ್ಟ ಕಾರು ಸಂ. ಕೆಎ-19-ಎಂಸಿ -6963 ಮತ್ತು ಕೆಎ-20-ಎಸಿ 3936 ಗಳನ್ನು ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿ ಕರಡು ನಕಾಶೆಯನ್ನು ತಯಾರಿಸಿರುತ್ತೇನೆ. ಸ್ಥಳದ ಭಾವಚಿತ್ರ ತೆಗೆಸಲಾಗಿದೆ. ಸ್ವತ್ತುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಈಗ ನಾನು ನೋಡಿದ ನಿಪಿ-3 ರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ನಿಪಿ-4 ರಲ್ಲಿ

ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ನಿಪಿ-5 ಭಾವಚಿತ್ರವನ್ನು ಸ್ಥಳದಲ್ಲಿ ತೆಗೆಯಲಾಗಿದೆ ಅದನ್ನು ನೋಡಿ ಗುರುತಿಸಿದ್ದೇನೆ.

2. ಅದೇ ದಿನ ಚಾಸಾ-1 ರವರ ಮರುಹೇಳಿಕೆ ಮತ್ತು ಚಾಸಾ-2 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-20 ಮತ್ತು 22 ರವರಿಂದ ತನಿಖೆ ಸಮಯ ಭಾವಚಿತ್ರ ತೆಗೆದ ಬಗ್ಗೆ ಕಲಂ 65 ಬಿ ಭಾರತ ಸಾಕ್ಷ್ಯ ಅಧಿನಿಯಮದ ದಡಿ ಪ್ರಮಾಣಪತ್ರ ಪಡೆದುಕೊಂಡಿರುತ್ತೇನೆ. ಸದ್ರಿ ಕಲಂ 65 ಬಿ ಭಾರತ ಸಾಕ್ಷ್ಯ ಅಧಿನಿಯಮದ ದಡಿ ಪ್ರಮಾಣಪತ್ರದಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಅಪಘಾತಕ್ಕೊಳಪಟ್ಟ 2 ಕಾರುಗಳನ್ನು ಯಾಂತ್ರಿಕ ಪರೀಶಿಲನೆನಡೆಸುವಂತೆ ಪ್ರಾದೇಶಿಕ ಅಧಿಕಾರಿ ಉಡುಪಿ ಇವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ದಿಃ30.01.2024 ರಂದು ಕೆಎ-19-ಎಸಿ 3936 ರ ಜೆಪಿಸಿ ಮಾಲಕರಾದ ಚಾಸಾ-11 ರವರು ವೃತ್ತ ಕಚೇರಿಗೆ ಹಾಜರಾಗಿ ಕಾರಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದ್ದನ್ನು ಪಡೆದುಕೊಂಡಿರುತ್ತೇನೆ. ಚಾಸಾ-3 ರವರ ಹೇಳಿಕೆ ದಾಖಲಿಸಿರುತ್ತೇನೆ. ಅದೇ ದಿನ ಕಾರನ್ನು ಚಾಸಾ-11 ರವರಿಗೆ ನಷ್ಟ ಭರ್ತಿ ಮುಚ್ಚಳಿಕೆ ಆಧಾರದಲ್ಲಿ ಬಿಡುಗಡೆಗೊಳಿಸಿರುತ್ತೇನೆ. ಈಗ ನಾನು ನೋಡಿದ ಮೋಟಾರು ವಾಹನ ಕಾಯಿದೆ ಕಲಂ 133 ರ ನೋಟಿಸಿನಲ್ಲಿ ನನ್ನ ಸಹಿ ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸದ್ರಿ ನೋಟಿಸಿಗೆ ಉತ್ತರವನ್ನು ನೀಡಿರುತ್ತಾರೆ. ಈಗ ನಾನು ಸದ್ರಿ ಉತ್ತರವನ್ನು ನೋಡಿದ್ದು ಅದರಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ.ಸದ್ರಿ ದಾಖಲೆಯನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

4. ದಿಃ01.02.2024 ರಂದು ಅಪಘಾತಪಡಿಸಿದ ಕಾರು ಕೆಎ-19 ಎಂಸಿ 6963 ಅದರ ನೊಂದಾಣಿ ಮಾಲಕರಾದ ಚಾಸಾ-12 ರವರಿಗೆ ಕಲಂ 133 ಐಎಂವಿ ಪ್ರಕಾರ ನೋಟಿಸು ನೀಡಿ ಉತ್ತರ ಪಡೆದಿರುತ್ತೇನೆ. ಉತ್ತರದಲ್ಲಿ ಅಪಘಾತ ಸಮಯ ಕಾರನ್ನು ಆರೋಪಿ ಪ್ರಥಮ ಬಿ ಶೆಟ್ಟಿ ಎಂಬುವವರು ಚಲಾಯಿಸುವುದಾಗಿ ನಮೂದಿಸಿರುತ್ತಾರೆ. ಕಾರಿಗೆ ಸಂಬಂಧಿಸಿದ ದಾಖಲಾತಿಗಳು ಚಾಲಕನ ಅನುಜ್ಞ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿಗೆ ಕಲಂ 41 ಎ ಸಿ ಆರ್ ಪಿಸಿ ರಡಿ ನೋಟಿಸು ನೀಡಿರುತ್ತೇನೆ. ಸಂಜೆ 5.30 ಗಂಟೆಗೆ ಆರೋಪಿ ನನ್ನಮುಂದೆ ಹಾಜರಾಗಿ ತಪ್ಪು ಒಪ್ಪಿ

ಕೊಂಡಿದ್ದು ದಸ್ತಗಿರಿ ನಿಯಮಕ್ಕೆ ಒಳಪಡಿಸಿರುತ್ತೇನೆ. ನಂತರ ಚಾಸಾ-10 ರವರ ಸೂಕ್ತ ಜಾಮೀನಿನಲ್ಲಿ ಬಿಡುಗಡೆಗೊಳಿಸಿರುತ್ತೇನೆ. ಅದೇ ದಿನ ಕೆಎಂ ಸಿ ಮಣಿಪಾಲ ಆಸ್ಪತ್ರೆಗೆ ಮೃತ ಪಿ ಎಂ ವರದಿ ನೀಡುವಂತೆ ಕೋರಿಕೊಂಡಿರುತ್ತೇನೆ. ಈಗ ನಾನು ನೋಡಿದ ನಷ್ಟ ಭರ್ತಿ ಮುಚ್ಚಳಿಕೆ ಪತ್ರದಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

5. ದಿಃ14.02.2024 ರಂದು ಕೆಎಂಸಿ ಆಸ್ಪತ್ರೆಯಿಂದ ಮೃತರ ಪಿಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ಈಗ ನಾನು ನೋಡಿದ ಪಿ ಎಂ ವರದಿಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆಯನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು ಆರೋಪಿಯನ್ನು ಗುರುಸುವಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಸದ್ರಿ ವಾಹನಗಳ ಭಾವಚಿತ್ರಗಳನ್ನು ನೋಡಿದರೆಗುರುತಿಸುತ್ತೇನೆ.

6. ನನಗೆ ವರ್ಗಾವಣೆಯಾಗಿದ್ದರಿಂದ ಕಡತವನ್ನು ಮುಂದಿನ ತನಿಖೆ ಬಗ್ಗೆ ಚಾಸಾ-25 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಪಿ ಡಿ ಜೆ ವಕೀಲರಿಂದಃ</u>

7. ಸ್ಥಳದಲ್ಲಿ ಆರೋಪಿ ನೀಡಿದಂತಹ ಪಿರ್ಯಾದನ್ನು ಮುಚ್ಚಿಟ್ಟು ಗಾಯಳುಗಳಿಗೆ ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಪ್ರ ವ ವರದಿಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ತಕ್ಷೀರು ಸ್ಥಳದ ಮಹಜರು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ